# ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

**ದೂರವಾಣಿ ಸಂಖ್ಯೆ :08172-267345, 235028, 263345** **ಫ್ಯಾಕ್ಸ್ ಸಂಖ್ಯೆ: 08172-265418**
website:www.hassan.nic.in Email: dcoffice.hassan@gmail.com

ನಂ. CKM-SKP 1/2016-17 ದಿನಾಂಕ : 27-11-2017

**ಸಾಮಾಜಿಕ ಪರಿಣಾಮ ಮೌಲ್ಯಮಾಪನ ಅಂತಿಮ ವರದಿ ಪ್ರಕಟಣೆ**

ಚಿಕ್ಕಮಗಳೂರು-ಸಕಲೇಶಪುರ ರೈಲ್ವೆ ಯೋಜನೆಯ ರೈಲ್ವೆ ಮಾರ್ಗ ನಿರ್ಮಾಣಕ್ಕಾಗಿ, ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಕಸಬಾ, ಬಿಕ್ಕೋಡು ಮತ್ತು ಅರೇಹಳ್ಳಿ ಹೋಬಳಿಯ 26 ಗ್ರಾಮಗಳ ಮತ್ತು ಸಕಲೇಶಪುರ ತಾಲ್ಲೂಕಿನ ಕಸಬಾ ಮತ್ತು ಬೆಳಗೋಡು ಹೋಬಳಿಯ 8 ಗ್ರಾಮಗಳ ಒಟ್ಟಾರೆ 34 ಗ್ರಾಮಗಳ ಜಮೀನುಗಳು ಭೂಸ್ವಾಧೀನವಾಗಲಿರುತ್ತದೆ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ "ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನ ಪುನರ್ ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ಪಾರದರ್ಶಕತೆ, (ಕರ್ನಾಟಕ) ನಿಯಮಗಳು-2015"ರ ನಿಯಮ 3(6) ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆ ಕಾರ್ಯವನ್ನು ನಿರ್ವಹಿಸಲು ಜಿ.ಜಿ.ವಿ **ಎಜುಕೇಷನ್ & ರೂರಲ್ ಡೆವಲಪ್‌ಮೆಂಟ್ ಸೊಸೈಟಿ & ಜಿ.ಜಿ.ವಿ ಎಂಟರ್ ಪ್ರೈಸಸ್, ತುಮಕೂರು ಇವರನ್ನು** ಏಜೆನ್ಸಿಯಾಗಿ ನೇಮಕಮಾಡಿ, ಮೌಲ್ಯಮಾಪನ ಕೈಗೊಳ್ಳುವ ಕುರಿತು ದಿನಾಂಕ 18-07-2017ರಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಸದರಿ ಏಜೆನ್ಸಿಯವರು ತಮ್ಮ ತಂಡದೊಂದಿಗೆ ಸಂಬಂಧಪಟ್ಟ ಗ್ರಾಮಗಳಿಗೆ ಭೇಟಿ ನೀಡಿ ಭೂಸ್ವಾಧೀನವಾಗಲಿರುವ ಜಮೀನುಗಳ ಭೂಮಾಲೀಕರನ್ನು ಸಂಪರ್ಕಿಸಿ ಅಗತ್ಯ ದತ್ತಾಂಶವನ್ನು ಸಂಗ್ರಹಿಸಿ ಕರಡು ವರದಿಯನ್ನು ಸಲ್ಲಿಸಿದ್ದರು. ನಂತರ ಕರಡು ವರದಿಯಲ್ಲಿನ ಅಂಶಗಳ ಬಗ್ಗೆ ದಿನಾಂಕ 24-10-2017 ರಿಂದ 26-10-2017 ರವರೆಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆ ನಡೆಸುವ ಬಗ್ಗೆ ವೇಳಾಪಟ್ಟಿಯನ್ನು ಪ್ರಕಟಿಸಿ, ಅಂತೆಯೇ ಪಂಚಾಯ್ತಿ/ಪುರಸಭಾ ಸದಸ್ಯರು, ಅಧಿಕಾರಿಗಳು, ಭೂ ಮಾಲೀಕರು, ರೈತರು, ಗ್ರಾಮಸ್ಥರ ಸಮ್ಮುಖದಲ್ಲಿ ಗ್ರಾಮಸಭೆಗಳನ್ನು ನಡೆಸಿರುತ್ತಾರೆ.

ಗ್ರಾಮಸಭೆಗಳಲ್ಲಿ ಕರಡು ವರದಿಯಲ್ಲಿನ ಅಂಶಗಳ ಕುರಿತು ಭೂಸ್ವಾಧೀನಕ್ಕೊಳಪಡುವ ಕುಟುಂಬದವರು ಮಾಡಿದ ಆಕ್ಷೇಪಣೆಗಳಿಗೆ ಸಂಬಂದಿಸಿದಂತೆ ಸೂಕ್ತ ಪರಿಹಾರ ಮಾರ್ಗಗಳ ಬಗ್ಗೆ ಚರ್ಚಿಸಿದ್ದು, ಸದರಿ ಅಂಶಗಳು ಮತ್ತು ಸಾಮಾಜಿಕ ಪರಿಣಾಮ ನಿರ್ವಹಣಾ ಯೋಜನೆಯೊಂದಿಗೆ ಸಾಮಾಜಿಕ ಪರಿಣಾಮ ಮೌಲ್ಯಮಾಪನ ಅಂತಿಮ ವರದಿಯನ್ನು ಸಲ್ಲಿಸಿರುವುದನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಚುರಪಡಿಸಲಾಗಿದೆ. ಅಂತಿಮ ವರದಿಯ ಪ್ರತಿಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ ಹಾಸನ ಮತ್ತು ಸಂಬಂಧಪಟ್ಟ ಗ್ರಾಮಪಂಚಾಯಿತಿ ಕಛೇರಿಯಲ್ಲಿ ಹಾಗೂ ಜಿಲ್ಲಾಧಿಕಾರಿ ಕಛೇರಿ ಹಾಸನ ಇಲ್ಲಿ ಇಡಲಾಗಿದೆ. ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು.

ರೋಹಿಣಿಸಿಂಧೂರಿ ಐ.ಎ.ಎಸ್
ಜಿಲ್ಲಾಧಿಕಾರಿ,
ಹಾಸನಜಿಲ್ಲೆ, ಹಾಸನ
27/11/17

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

3. ಮಾನ್ಯ ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
4. ಉಪಮುಖ್ಯ ಇಂಜಿನೀಯರ್, ನಿರ್ಮಾಣ, ಪಶ್ಚಿಮ-I, ಬೆಂಗಳೂರು ಕಂಟೋನ್ಮೆಂಟ್, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕಾರ್ಯಪಾಲಕ ಇಂಜಿನೀಯರ್, ನಿರ್ಮಾಣ, ರೈಲ್ವೆ ಸ್ಟೇಷನ್, ದಕ್ಷಿಣ ಪಶ್ಚಿಮ ರೈಲ್ವೆ, ಹಿರೇಮಗಳೂರು, ಚಿಕ್ಕಮಗಳೂರು ಜಿಲ್ಲೆ -577101. ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಎನ್.ಐ.ಸಿ ಅಧಿಕಾರಿ ಜಿಲ್ಲಾಪಂಚಾಯಿತಿ ಹಾಸನ ಇವರಿಗೆ ಕಳುಹಿಸುತ್ತಾ, ಪ್ರಕಟಣೆಯನ್ನು ಜಿಲ್ಲಾ. ಜಾಲತಾಣದಲ್ಲಿ ಮೆಲುನಕಲು (ಅಪ್‌ಲೋಡ್)ಮಾಡಲು ಕೋರಿದೆ.
7. ತಹಸೀಲ್ದಾರ್ ಬೇಲೂರು/ಸಕಲೇಶಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
8. ಮುಖ್ಯಾಧಿಕಾರಿ ಪುರಸಭೆ ಬೇಲೂರು ಇವರಿಗೆ ಕಳುಹಿಸಿದೆ.
9. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಬೇಲೂರು ಮತ್ತು ಸಕಲೇಶಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
10. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಯಮಸಂಧಿ, ಚಿಕ್ಕಮೇದೂರು, ಸನ್ಯಾಸಿಹಳ್ಳಿ, ಕುಶಾವರ, ಬಿಕ್ಕೋಡು, ಲಕ್ಕುಂದ, ಬೆಳಗೋಡು ಮತ್ತು ಹಲಸುಲಿಗೆ ಇವರಿಗೆ ಕಳುಹಿಸಿದೆ.
11. ದಯಾನಂದಮೂರ್ತಿ ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಅಂಡ್ ಜಿಜಿವಿ ಎಂಟರ್‌ಪ್ರೈಸಸ್, ಯಲ್ಲಾಪುರ, ಅರಕೆರೆ ಅಂಚೆ, ತುಮಕೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.